ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—

ಅ) ಹೌದು

ಆ) ೧) ಐದು

೨) ಹೆಸರುಗಳು ಕೆಳಕಂಡಂತಿವೆ.

೧) ಶ್ರೀ ಆರ್.ಎಲ್. ಜಾಲಪ್ಪ, ಸಹಕಾರ ಮಂತ್ರಿಗಳು

೨) ಶ್ರೀ ಅಬ್ದುಲ್ ನಜೀರ್ ಸಾಬ್, ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು

೩) ಶ್ರೀ ಬಿ.ಎ. ಜೀವಿಜಯ, ಅರಣ್ಯ ರಾಜ್ಯ ಮಂತ್ರಿಗಳು

೪) ಶ್ರೀ ಆರ್.ಎನ್. ಲಕ್ಷ್ಮೀಪತಿ, ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು

೫) ಶ್ರೀ ಪಿ.ಜಿ.ಆರ್. ಸಿಂಧ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್.ಆರ್. ಬೊಮ್ಮಾಯಿ.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸದನದ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ರಾಜ್ಯದಲ್ಲಿ ಭತ್ತದ ಲೆವಿ ನೀತಿ ಬದಲಾವಣೆ ಬಗ್ಗೆ

ಪ್ರಶ್ನೆ ಸಂಖ್ಯೆ ೨೭೮ (೧೮೪) ಡಾ. ವಿ.ಎಸ್. ಆಚಾರ್ಯ (ಉಡುಪಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಸುಗ್ಗಿ ಸಮಯದಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಭತ್ತ ಖರೀದಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದೇ ?

ಆ) ಸರ್ಕಾರದವರು ಈ ಹೊಸ ಲೆವಿ ನೀತಿಯನ್ನು ಯಾವಾಗ ರೂಪಿಸುವುದು ?

ಶ್ರೀ ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಸಾರ್ವಜನಿಕ ಆರೋಗ್ಯ ಘಟಕವನ್ನು ಹಂಪೆಯಲ್ಲಿ ಪ್ರಾರಂಭಿಸುವ ಬಗ್ಗೆ

೧೦೬. ಶ್ರೀ ಜಿ. ಶಂಕರಗೌಡ(ಹೊಸಕೋಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ :

(ಅ) ಹೊಸಪೇಟೆ ತಾಲ್ಲೂಕಿನಲ್ಲಿರುವ ಹಂಪೆಯು ಒಂದು ಪ್ರಮುಖ ಯಾತ್ರಾ ಸ್ಥಳವೆಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ :

(ಆ) ಹಂಪೆಯಲ್ಲಿ ಸರಿಯಾದ ಸರಕಾರಿ ಸಾರ್ವಜನಿಕ ಆರೋಗ್ಯ ಘಟಕ ಇಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ;

ಮಾನ್ಯ ಸದಸ್ಯರು ಗೈರುಹಾಜರಿ

(ಇ) ಹಾಗಿದ್ದಲ್ಲಿ, ಹಂಪೆಯಲ್ಲಿ ಬೇಗನೆ ಸಾರ್ವಜನಿಕ ಆರೋಗ್ಯ ಘಟಕವನ್ನು ಸರಕಾರದವರು ಪ್ರಾರಂಭಿಸುವರೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

(ಅ) ಹೌದು.

(ಆ) ಹೌದು.

(ಇ) ಹಂಪೆಯಲ್ಲಿ ಒಂದು ಸರಕಾರಿ ಆಯುರ್ವೇದಿಕ್ ಆಸ್ಪತ್ರೆಯಿದೆ. ಮತ್ತು ಹಂಪೆಯಿಂದ ೭ ಕಿ.ಮೀ. ದೂರದಲ್ಲಿರುವ ಕಮಲಾಪುರದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಘಟಕವಿದೆ. ಆದುದರಿಂದ ಅತಿ ತುರ್ತಾಗಿ ಪ್ರಾಥಮಿಕ ಆರೋಗ್ಯ ಘಟಕವನ್ನು ಮಂಜೂರು ಮಾಡಲು ಸಾಧ್ಯವಾಗುವುದಿಲ್ಲ.

ರಾಜ್ಯದಲ್ಲಿ ಅನುದಾನ ಪಡೆಯುತ್ತಿರುವ ಕ್ರೀಡಾ ಸಂಸ್ಥೆಗಳು

೧೪೪. ಶ್ರೀ ಪಿ. ರಾಮುಚೇವ್ (ಮಲ್ಲೇಶ್ವರಂ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

(ಅ) ೧೯೮೧-೮೨ ಮತ್ತು ೧೯೮೩ ರಲ್ಲಿ ಅನುದಾನವನ್ನು ಕೇಳಿರುವ ಕ್ರೀಡಾ ಸಂಸ್ಥೆಗಳ ಹೆಸರುಗಳೇನು.

(ಆ) ಯಾವ ಯಾವ ಸಂಸ್ಥೆಗಳಿಗೆ ಎಂದು ಎಷ್ಟೆಷ್ಟು ಅನುದಾನವನ್ನು ನೀಡಲಾಗಿದೆ.

(ಇ) ಯಾವ ಯಾವ ಸಂಸ್ಥೆಗಳಿಗೆ ಅನುದಾನವನ್ನು ತಿರಸ್ಕರಿಸಲಾಗಿದೆ ಮತ್ತು ಹಾಗೆ ತಿರಸ್ಕರಿಸಲು ಕಾರಣವೇನು ;

(ಈ) ಕ್ರೀಡಾ ಸಂಸ್ಥೆಗಳ ಕೋರಿಕೆಯಂತೆ ಅನುದಾನ ಸಂಹಿತೆಯನ್ನು ಬದಲಾಯಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು.

ಶ್ರೀ ಜೀವರಾಜ ಆಳ್ವಾ (ಕನ್ನಡ ಮತ್ತು ಸಂಸ್ಕೃತಿ ಮತ್ತು ಯುವಜನ ರಾಜ್ಯ ಮಂತ್ರಿಗಳು).—

ಉತ್ತರ —(ಅ), (ಆ) ದಯವಿಟ್ಟು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂದ 'ಅ' ನ್ನು ನೋಡಿರಿ.

(ಇ) ಈಜು, ವಾಲೀಬಾಲ್, ಫುಟ್‌ಬಾಲ್ ಒಲಂಪಿಕ್ ಸ್ಪಾರ್ಕ್ ಸಂಸ್ಥೆಗಳಿಗೆ ಅನುದಾನವನ್ನು ತಿರಸ್ಕರಿಸಲಾಗಿದೆ. ಸಂದರಿ ಸಂಘಗಳು ಇಲಾಖೆ ಅನುದಾನ ಸಮಿತಿಯ ನಿಯಮಾವಳಿಗೆ ಅನುಗುಣವಾಗಿ ಸಮಂಜಸ ಮಾಹಿತಿಗಳನ್ನು ಒಪ್ಪಿಸದೇ ಇರುವುದರಿಂದ ತಿರಸ್ಕರಿಸಲಾಗಿದೆ.

(ಈ) ಸದರಿ ಅನುದಾನ ಸಂಹಿತೆಯನ್ನು ೧೯೮೨ ನೇ ಆಗಸ್ಟ್ ಮಾಹೆಯಲ್ಲಿ ಜಾರಿಗೆ ತರಲಾಯಿತು. ಸಂಹಿತೆಯನ್ನು ಬದಲಾಯಿಸಲು ಇಲಾಖೆಯು ಪರಿಶೀಲಿಸುತ್ತಿದೆ.